

# ವಿಶ್ವದ ಸಂಭ್ರಮಕ್ಕೆ ಕೆಂಪುಡುಗೆ, ಒಡವೆ ಸಾಥ್!

ಫ್ಯಾಷನ್‌ಪ್ರಿಯರ ಪಾಲಿಗೆ ಕ್ರಿಸ್‌ಮಸ್ 'ಕೆಂಪುಡುಗೆ ಹಬ್ಬ'. ಸಾಂತಾಕ್ಲಾಸ್ ಮಾದರಿಯ ಉಡುಪು ತೊಟ್ಟು, ಕ್ರಿಸ್‌ಮಸ್ ಟ್ರೀ ಹೋಲುವ ಒಡವೆ ಧರಿಸಿ, ಇದೇ ಮಾದರಿಯ ಕೇಶಶೈಲಿ ಮಾಡಿಸಿಕೊಂಡು 'ಕ್ರಿಸ್‌ಮಸ್ ಫ್ಯಾಷನ್' ಟ್ರೆಂಡ್ ಆಗಿರುವುದು ಸದ್ಯದ ಫ್ಯಾಷನ್ ಲೋಕದ ಹೊಸ ಬೆಳವಣಿಗೆ.

■ ಉಮಾ ವೇಣೂರು

ಕ್ರಿಸ್‌ಮಸ್ ಹಬ್ಬ ಎಂದರೆ ಅದೊಂದು ವಿಶ್ವ ಸಂಭ್ರಮ. ವಿಶ್ವದೆಲ್ಲೆಡೆ ಆಚರಿಸುವ ಈ ಹಬ್ಬವನ್ನು ಫ್ಯಾಷನ್ ಮಟ್ಟಿಗೆ 'ಕೆಂಪುಡುಗೆ ಹಬ್ಬ' ಎಂದೇ ಕರೆಯಲಾಗುತ್ತದೆ. ಈ ಹಬ್ಬಕ್ಕೆ ಕೇಕ್‌ಗಳದ್ದೇ ಕಾರುಬಾರು ಆದರೂ ಫ್ಯಾಷನ್ ಬಯಸುವ ಯುವತಿಯರು ಮಕ್ಕಳು ಉಡುಗೆ, ಒಡವೆಗಳ ಬಗ್ಗೆಯೂ ವಿಶೇಷ ಆಸ್ಥೆ ವಹಿಸುತ್ತಿದ್ದಾರೆ.

ಇದಕ್ಕಾಗಿಯೇ ಸಾಂತಾಕ್ಲಾಸ್ ಥೀಮ್ ಇರುವ ಉಡುಪುಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಕ್ರಿಸ್‌ಮಸ್ ಹಬ್ಬಕ್ಕೆ ಇನ್ನೂ ಒಂದು ವಾರವಿರುವಾಗಲೇ ಮನೆ ಮನೆಗೆ ಬಂದು ಸಿಹಿ ಹಂಚುವ ಸಾಂತಾಕ್ಲಾಸ್ ಅಜ್ಜನ ಉಡುಗೆಯನ್ನೇ ಹೋಲುವ ಕೆಂಪುಬಣ್ಣದ ಡ್ರೆಸ್ ಹಾಗೂ ಟೋಪಿಯನ್ನು ಮಕ್ಕಳು ದೊಡ್ಡವರೆನ್ನದೆ ಎಲ್ಲರೂ ಧರಿಸುವುದು ವಿಶೇಷ. ಇನ್ನು ವಸ್ತ್ರ ವಿನ್ಯಾಸಕರ ವಿಷಯಕ್ಕೆ ಬಂದರೆ.. ಟ್ರೆಂಡ್ ಸೆಟರ್ ಹೆಸರಿನಲ್ಲಿ ಕೆಂಪು ಬಣ್ಣದ ಉಡುಗೆಗಳನ್ನು ತಯಾರಿಸಿ ಅದಕ್ಕೆ 'ಕ್ರಿಸ್‌ಮಸ್ ಫ್ಯಾಷನ್' ಎಂದು ಹೆಸರಿಟ್ಟು ಮಹಿಳೆ ಮಕ್ಕಳನ್ನು ಸೆಳೆಯುವುದರಲ್ಲಿ ತಾ ಮುಂದು, ನಾ ಮುಂದು ಎಂಬಂತೆ ಮಾರುಕಟ್ಟೆಗೆ ಲಗ್ಗೆ ಇಡುತ್ತಿರುವುದು ಹೊಸ ಬೆಳವಣಿಗೆ.

ಹಾಗೆ ನೋಡಿದರೆ ಕ್ರಿಸ್‌ಮಸ್‌ಗೂ ಕೆಂಪು–ಬಿಳಿ ಬಣ್ಣಕ್ಕೂ ಅನನ್ಯ ನಂಟು. ಸಾಂತಾಕ್ಲಾಸ್ ಉಡುಗೆ ಕೆಂಪು–ಬಿಳಿ ಬಣ್ಣಗಳ ಸಮ್ಮಿಶ್ರಣ. ವಿನ್ಯಾಸ ಬಣ್ಣ ಎರಡೂ ಫ್ಯಾಷನಬಲ್ ಆಗಿರುವುದರಿಂದ ಪುಟ್ಟ ಹುಡುಗಿಯರು, ಯುವತಿಯರು ಈ ಉಡುಪನ್ನು ಧರಿಸಲು ಇಷ್ಟಪಡುತ್ತಾರೆ.

ಮಹಿಳೆಯರಿಗೆ ತುಂಬು ತೋಳಿನ ಕೆಂಪು ಗೌನ್, ತೋಳಿನ ತುದಿಯಲ್ಲಿ ಬಿಳಿ ಬಣ್ಣದ ಉಣ್ಣೆ ಬಟ್ಟೆಯ ವಿನ್ಯಾಸ ಅಷ್ಟೇ ಅಲ್ಲ ಕತ್ತಿನ ಸುತ್ತ ಉಣ್ಣೆಯ ಕಾಲರ್ .. ಇವಿಷ್ಟು ವಿನ್ಯಾಸ ಮಾಡಿದರೆ ಥೇಟ್ ಸಾಂತಾನ ಉಡುಗೆಯ ಪ್ರತಿರೂಪ ಸಿದ್ಧವಾದಂತೆ. ಇಷ್ಟು ಮಾತ್ರವಲ್ಲದೆ ಕ್ರಿಸ್‌ಮಸ್ ಫ್ಯಾಷನ್